**ಕರ್ನಾಟಕ ವಿಧಾನ ಪರಿಷತ್**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1036
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
ದಿನಾಂಕ : 22.09.2022
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; | ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ಅನ್ವಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ಕ್ಕೆ ಹಂಚಿಕೆಯಾದ 130 ಟಿ.ಎಂ.ಸಿ. ನೀರಿನ ಬಳಕೆಗಾಗಿ ಯೋಜನೆಗೆ ನೀಡಲಾದ ಆಡಳಿತಾತ್ಮಕ ಅನುಮೋದನೆ ಮೇರೆಗೆ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ಕಲಬುರಗಿ, ಯಾದಗಿರ್, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿಯ 5.94 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾದ 09 ಯೋಜನೆಗಳಾದ (1) ಮುಳವಾಡ ಏತ ನೀರಾವರಿ, (2) ಚಿಮ್ಮಲಗಿ ಏತ ನೀರಾವರಿ, (3) ಇಂಡಿ ಏತ ನೀರಾವರಿ, (4) ರಾಂಪುರ ಏತ ನೀರಾವರಿ, (5) ಕೊಪ್ಪಳ ಏತ ನೀರಾವರಿ, (6) ಮಲ್ಲಾಬಾದ ಏತ ನೀರಾವರಿ, (7) ಹೆರಕಲ್ ಏತ ನೀರಾವರಿ (8) ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಹಾಗೂ (9) ಭೀಮಾ ಫ್ಲ್ಯಾಂಕ್ ಉಪಯೋಜನೆಗಳ ಕಾಮಗಾರಿಗಳು ಮತ್ತು ಯೋಜನೆಯಡಿಯ ಭೂಸ್ವಾಧೀನ ಮತ್ತು ಪುನರ್ವಸತಿ & ಪುನರ್‌ನಿರ್ಮಾಣ ಹಾಗೂ ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. |
| ಆ) | ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519.6 ನಿಂದ 524.256 ಕ್ಕೆ ಎತ್ತರಿಸುವುದರಿಂದ ಎಷ್ಟು ಹಳ್ಳಿಗಳು ಮುಳುಗಡೆಯಾಗಲಿವೆ; ಹಾಗೂ ಮುಳುಗಡೆಯಾದ ಪ್ರದೇಶಗಳಿಗೆ ಪುನರ್ ವಸತಿ ಕಲ್ಪಿಸಲು ಬೇಕಾಗುವ ಹಣ ಎಷ್ಟು; | ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರಡಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್. 519.60 ಮೀ. ನಿಂದ 524.256 ಮೀ.ಗೆ ಎತ್ತರಿಸಿದಾಗ ಜಲಾಶಯದ ಹಿನ್ನೀರಿನಲ್ಲಿ 20 ಗ್ರಾಮಗಳು ಹಾಗೂ ಬಾಗಲಕೋಟೆ ಪಟ್ಟಣದ 11 ವಾರ್ಡ್‌ಗಳು ಮುಳುಗಡೆಯಾಗಲಿದೆ.<br><br>ಕೃಷ್ಣಾ ಮೇಲ್ದಂಡೆ ಯೋಜನಗೆ ಅನುಮೋದನೆಗೊಂಡ ರೂ.51,148.94 ಕೋಟಿ ಪರಿಷ್ಕೃತ ಅಂದಾಜು ಮೊತ್ತದಲ್ಲಿ ಸದರಿ ಮುಳುಗಡೆಯಾಗುವ ಪ್ರದೇಶಗಳಿಗೆ ಪುನರ್‌ವಸತಿ & ಪುನರ್ ನಿರ್ಮಾಣ ಕಲ್ಪಿಸಲು ಅಂದಾಜಿಸಲಾದ ಮೊತ್ತ ರೂ.12,516.57 ಕೋಟಿ ಆಗಿರುತ್ತದೆ. |
| ಇ) | ಕಾಮಗಾರಿಗಳನ್ನು ಪೂರ್ಣಗೊಳಿಸಲು ತಗಲುವ ವೆಚ್ಚವೆಷ್ಟು; ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು; | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಉಪ ಯೋಜನೆಗಳಡಿಯ ಏತ ನೀರಾವರಿ ಯೋಜನೆಗಳ ಮುಖ್ಯ ಸ್ಥಾವರಗಳ ನಿರ್ಮಾಣ, ಮುಖ್ಯ / ಶಾಖಾ ಕಾಲುವೆ ನಿರ್ಮಾಣ ಮತ್ತು ಅಚ್ಚುಕಟ್ಟು ವ್ಯಾಪ್ತಿಯಡಿಯ ಕೆರೆಗಳಿಗೆ ನೀರು ಹರಿಸಲು ಅನುಕೂಲವಾಗುವ ಕೆಲವು ವಿತರಣಾ ಕಾಲುವೆ ಜಾಲಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯಡಿಯ ಬಾಕಿ ವಿತರಣಾ ಕಾಲುವೆ ಜಾಲಗಳನ್ನು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಕುರಿತು ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆ ಹೊರಡಿಸಿದ ನಂತರ ಸಮಾನಾಂತರವಾಗಿ ಅನುಷ್ಠಾನಗೊಳಿಸಲು ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. |
| ಈ) | ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ತೀರ್ಪಿನ ವಿವರ ನೀಡುವುದು? | |

ಇದಲ್ಲದೇ, ಯೋಜನೆಯಡಿಯ ಭೂಸ್ವಾಧೀನತೆ ಹಾಗೂ ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಕಾರ್ಯಗಳನ್ನು ಸಹ ಸಮಾನಾಂತರವಾಗಿ ಹೊಸ ಭೂಸ್ವಾಧೀನ ಕಾಯ್ದೆ 2013 ರನ್ವಯ ಅನುಷ್ಠಾನಗೊಳಿಸಲಾಗುತ್ತಿದೆ.

ಕೃಷ್ಣಾ ಜಲವಿವಾದ ನ್ಯಾಯಾಧೀಕರಣ-2ರ ಅಂತರ ರಾಜ್ಯ ಜಲವಿವಾದ ಕಾಯ್ದೆಯ ಸೆಕ್ಷನ್ 5(2) ಅಡಿಯಲ್ಲಿ ತನ್ನ ತೀರ್ಮಗಳನ್ನೊಳಗೊಂಡ ವರದಿಯನ್ನು ದಿನಾಂಕ:31.12.2010 ರಂದು ಹಾಗೂ ಸೆಕ್ಷನ್ 5(2) ರಡಿಯಲ್ಲಿ ಮುಂದುವರೆದ ವರದಿಯನ್ನು ದಿನಾಂಕ:29.11.2013 ರಂದು ನೀಡಿರುತ್ತದೆ.

ಕೃಷ್ಣಾ ನ್ಯಾಯಾಧೀಕರಣ-2 ರಡಿಯಲ್ಲಿ ರಾಜ್ಯವಾರು ವಿವಿಧ ಅವಲಂಬಿಕೆಗಳಲ್ಲಿ ಹಂಚಿಕೆಯಾದ ಒಟ್ಟು ನೀರಿನ ಪ್ರಮಾಣ ಈ ಕೆಳಗಿನಂತಿದೆ.

| ರಾಜ್ಯ | ಕೃಷ್ಣಾ ಜಲವಿವಾದ ನ್ಯಾಯಾಧೀಕರಣ-2 |
|---|---|
| ಕರ್ನಾಟಕ | 173 |
| ಮಹಾರಾಷ್ಟ್ರ | 81 |
| ಆಂಧ್ರ ಪ್ರದೇಶ | 194 |
| ಒಟ್ಟು | 448 |

ರಾಜ್ಯಕ್ಕೆ ಹಂಚಿಕೆಯಾದ ಒಟ್ಟು 173 ಟಿ.ಎಂ.ಸಿ. ಅಡಿ ಪ್ರಮುಖವಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಅನುಷ್ಠಾನಕ್ಕಾಗಿ ಒಟ್ಟು 130 ಟಿ.ಎಂ.ಸಿ. ನೀರಿನ ಹಂಚಿಕೆ ಆಗಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಹಂಚಿಕೆಯಾದ ನೀರಿನ ಬಳಕೆಗಾಗಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹನೆ ಮಟ್ಟ ಆರ್.ಎಲ್.519.60 ಮೀ. ರಿಂದ ಆರ್.ಎಲ್. 524.256 ಮೀ.ಗೆ ಎತ್ತರಿಸುವುದಾಗಿದ್ದು, ಇದು ಕೃಷ್ಣಾ ನ್ಯಾಯಾಧೀಕರಣ-2 ರ ಅಂತಿಮ ತೀರ್ಪಿನ ಕುರಿತು ಕೇಂದ್ರ ಸರ್ಕಾರದಿಂದ ಹೊರಡಿಸುವ ಗೆಜೆಟ್ ಅಧಿಸೂಚನೆಗೆ ಒಳಪಟ್ಟಿರುತ್ತದೆ. ಇನ್ನೂ ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆ ಆಗಬೇಕಾಗಿರುತ್ತದೆ.

ಜಸಂಇ 114 ಡಬ್ಲ್ಯೂಬಿಎಂ 2022

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು